<u>ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ ನ್ಯಾಯಾಲಯ ಕೊಪ್ಪಳ</u>

ಸಿ.ಸಿ.ನಂ.962ಃ2015

ಸಿಡಬ್ಲೂ 2 ಪಿಡಬ್ಲೂಃ 2

ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

ದಿನಾಂಕಃ 09-03-2020

| | |
|---|---|
| ಸಾಕ್ಷಿದಾರರ ಹೆಸರು | ಶ್ರೀಧರ |
| ತಂದೆ ಹೆಸರು | ರಾಮಚಂದ್ರಪ್ಪ |
| ವಯಸ್ಸು | 53 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಾಸಸ್ಥಳ | ಹಿಟ್ನಾಳ |

<u>ಮುಖ್ಯ**ವಿಚಾರಣೆಃ** ಸಸಅ ರವರಿಂದಃ</u>

ಚಾಸಾ 1 ನನ್ನ ಹೆಂಡತಿ. ಆರೋಪಿ 1 ಮತ್ತು 2 ನನ್ನ ಅಣ್ಣ ಮತ್ತು ಅತ್ತಿಗೆಯಾಗಬೇಕು. ಆರೋಪಿಯ ಮನೆ ನಮ್ಮ ಮನೆ ಒಂದೇ ಮನೆಯ ಎರಡು ಭಾಗಗಳು. ಆರೋಪಿಯ ಮನೆ ಪಶ್ಚಿಮಕ್ಕೆ ನಮ್ಮ ಮನ ಪೂರ್ವಕ್ಕೆ ಇರುತ್ತದೆ. ದಿಃ19-7-2015 ರಂದು ಆರೋಪಿತರು ಚರಂಡಿ ನೀರನ್ನು ರಸ್ತೆಗೆ ಬಿಡಲು ಹಾದಿ ಮಾಡುತ್ತಿದ್ದರು. ನನ್ನ ಹೆಂಡತಿ ಅದನ್ನು ವಿಚಾರಿಸಿದಾಗ ಆರೋೕಪಿತರ ಅವಳ ಜೊತೆ ಜಗಳ ತೆಗೆದು ಕೊಡಲಿಯ ಕಾವಿನಿಂದ ಬಲಭುಜಕ್ಕೆ ಹಲ್ಲೆ ಮಾಡಿರುತ್ತಾರೆ. ನಾನು ಸ್ಥಳಕ್ಕೆ ಹೋದಾಗ ನನ್ನನ್ನೂ ಸಹ ಅವ್ಯಾಚ್ಯ ಶಬ್ದಗಳಿಂದ ಬೈದು ಅದೇ ಕಟ್ಟಿಗೆಯಿಂದ ನನ್ನ ಮೇಲೆ ಹೊಟ್ಟೆಗೆ ಹಲ್ಲೆ ಮಾಡಿರುತ್ತಾರೆ. ಚಾಸಾ 1 ರವರಿಗೂ ಸಹ ಅವ್ಯಾಚ್ಯ ಶಬ್ದಗಳಿಂದ ಬೈದು ನನ್ನ ಮೇಲೆ ಪ್ರಾಣಬೆದರಿಕೆ ಹಾಕಿರುತ್ತಾರೆ, ಚಾಸಾ 3 ಮತ್ತು 4 ಸ್ಥಳಕ್ಕೆ ಬಂದು ಬಿಡಿಸಿರುತ್ತಾರೆ. ಈ ಬಗ್ಗೆ ಚಾಸಾ 1 ದೂರು ನೀಡಿರುತ್ತಾರೆ. ನಾನು ಹೇಳಿಕೆ ನೀಡಿರುತರ್್ತೇನೆ. ಕಟ್ಟಿಗೆಯನ್ನು ಈಗಾಗಲೇ ಮು ಮಾ 1 ಎಂದು ಗುರುತಿಸಲಾಗಿದೆ.

**ಪಾಟೀಸವಾಲು ಆರೋಪಿತರ ಪರ ವಕೀಲರಿಂದಃ**

ನನಗುನ್ನ ಮತ್ತು ನ ಸಹೋದರನಿಗೂ ಬಹಳ ವರ್ಷಗಳಿಂದ ವೈಷಮ್ಯ ಇದೆ ಎಂದರೆ ಸರಿಯಲ್ಲ. 2 ನೇ ಆರೋಪಿ ನನ್ನ ವಿರುದ್ದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ 2012 ರಲ್ಲಿ ದೂರು ಸಲ್ಲಿಸಿದ್ದರು ಎಂದರೆ ಸರಿ. ಜಗಳ ನಡೆದಾಗ ಚಾಸಾ 3 ಮತ್ತು 4 ನ್ನು ಬಿಟ್ಟು ಬೇರೆ ಯಾರೂ ಸೇರಿರಲಿಲ್ಲ. ಬೆಳಿಗ್ಗೆ 10 ಗಂಟೆಗೆ ಆರಂಭವಾಗಿ ಅರ್ದ ಗಂಟೆಯಿಂದ ಮುಕ್ಕಾಲು ನಡೆದಿರುತ್ತದೆ. ನಾನು ಒಂದು ಬಾರಿ ಪೋಲಿಸ ಠಾಣೆಗೆ ಹೋಗಿರುತ್ತೇನೆ. ಪಿರ್ಯಾದಿ ನೀಡಲು ಹೋಗಿರುತ್ತೇನೆ. ಮತ್ತೆ ಹೋಗಿರುವುದಿಲ್ಲ. ನನ್ನ ಹೇಳಿಕೆಯನ್ನು ಬರೆದುಕೊಳ್ಳಲಿಲ್ಲ. ನಾನು ಆರೋಪಿತರ ವಿರುದ್ಧ ಮೊದಲು ದೂರು

ನೀಡಿದ್ದೇನೆಂದರೆ ಸರಿಯಲ್ಲ. ಆದರಿಂದ ಆರೋಪಿತರು ನಮ್ಮ ಮೇಲೆ ದೂರು ನೀಡಿದ್ದರು ಎಂದರೆ ಸರಿಯಲ್ಲ. ಕೊಡಲಿ ಕಾವಿನಿಂದ ನಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆ. ಪಿರ್ಯಾದಿಯಲ್ಲಿ ಕೊಡಲಿಯಿಂದ ಎಂದು ಹೇಳಿ ಬರೇಸಿಲ್ಲ. ಯಾವುದೇ ಘಟನೆ ನಡೆದಿಲ್ಲ, ಚರಂಡಿ ವಿಷಯದಲ್ಲಿ ಆದ ಮಾತಿನ ಚಕಮಕಿಯನ್ನು ಬಳಸಿಕೊಂಡು ದೂರು ಮತ್ತ ಪ್ರತಿದೂರು ಸಲ್ಲಿಸಿಕೊಂಡು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

ಪ್ರ. ಜೆ ಎಂ ಎಫ್ ಸಿ ಕೊಪ್ಪಳ